(ಆಡಳಿತ ಭಾಷೆ ಕನ್ನಡ, ಕನ್ನಡದಲ್ಲೇ ವ್ಯವಹರಿಸಿ)

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂಗಳೂರು-560003**

ಸಂಖ್ಯೆ: ವಿ1/ವಿಸಪ/ಅಂ.ಪ.ರ/ಪ.ಕಾ/2018-19 ದಿನಾಂಕ:18-12-2018

## ಜ್ಞಾಪನ

ವಿಷಯ: 2018ರ ಮೇ ಮಾಹೆಯಲ್ಲಿ ನಡೆದ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಯ ಉತ್ತೀರ್ಣರಾದವರ ಅಂಕಪಟ್ಟಿ ಮತ್ತು ಗೈರು ಹಾಜರಿ/ಅನುತ್ತೀರ್ಣರಾದವರ ಎಂ.ಎಸ್.ಎ.ಗಳನ್ನು ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ರವಾನಿಸುವ ಬಗ್ಗೆ.

******

2018ರ ಮೇ ಮಾಹೆಯಲ್ಲಿ ನಡೆದ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗೆ ಕುಳಿತು ಉತ್ತೀರ್ಣರಾದ ಪರೀಕ್ಷಾರ್ಥಿಗಳ ಅಂಕಪಟ್ಟಿಗಳನ್ನು ಮತ್ತು ಗೈರು ಹಾಜರಿ/ಅನುತ್ತೀರ್ಣರಾದವರ ಎಂ.ಎಸ್.ಎ. ಗಳನ್ನು ರವಾನಿಸಲಾಗಿದೆ. ಈ ಬಗ್ಗೆ ಸಂಬಂಧಿಸಿದ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಅಭ್ಯರ್ಥಿಗಳಿಗೆ ಅಂಕಪಟ್ಟಿ/ಎಂ.ಎಸ್.ಎ ಗಳನ್ನು ವಿತರಿಸುವ ಮೊದಲು ಈ ಕೆಳಕಂಡ ಅಂಶಗಳನ್ನು ಎಚ್ಚರಿಕೆಯಿಂದ ಗಮನಿಸಲು ಸೂಚಿಸಿದೆ. ಇಲ್ಲದಿದ್ದಲ್ಲಿ **ಮುಂದಿನ ಆಗು ಹೋಗುಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.**

1. ನಿಮ್ಮ ಕೇಂದ್ರಕ್ಕೆ ಸಂಬಂಧಿಸಿದಂತೆ ಉತ್ತೀರ್ಣರಾದವರ ಅಂಕಪಟ್ಟಿಗಳು ಮತ್ತು ಗೈರು ಹಾಜರಿ, ಅನುತ್ತೀರ್ಣರಾದವರ ಎಲ್ಲಾ ಅಭ್ಯರ್ಥಿಗಳ ಎಂ.ಎಸ್.ಎ. ಗಳು ಬಂದಿದೆಯೇ ಎಂದು ಪರಿಶೀಲಿಸುವುದು. ಕಡಿಮೆ ಇದ್ದಲ್ಲಿ ತಕ್ಷಣವೇ ಪರೀಕ್ಷಾ ಮಂಡಳಿಯ ಗಮನಕ್ಕೆ ತರುವುದು ಹಾಗೂ ಕಳುಹಿಸುತ್ತಿರುವ ಪರಿಷ್ಕೃತ ಫಲಿತಾಂಶ ಪಟ್ಟಿಯನ್ನು ಕೇಂದ್ರದಲ್ಲಿ ದಾಖಲೆಯಾಗಿ ಇಟ್ಟುಕೊಳ್ಳುವುದು.
2. ಶಾಲಾ ಮುಖ್ಯಸ್ಥರು ಅಭ್ಯರ್ಥಿಯ ಅಂಕಪಟ್ಟಿ ಮತ್ತು ಎಂ.ಎಸ್.ಎ. ಗಳಲ್ಲಿ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ಎಸ್.ಎಸ್.ಎಲ್.ಸಿ.ಅಂಕಪಟ್ಟಿಯಲ್ಲಿದ್ದಂತೆ ಅಥವಾ ಶಾಲಾ ದಾಖಲಾತಿಯಲ್ಲಿದ್ದಂತೆ ಸ್ಪಷ್ಟವಾಗಿ ಇದೆಯೇ ಇಲ್ಲವೇ ಎಂಬುವುದನ್ನು ಗಮನಿಸಲು ತಿಳಿಸುವುದು.
3. ಅಭ್ಯರ್ಥಿಯ ಹೆಸರು, ತಂದೆಯ ಹೆಸರು ಹಾಗೂ ಅಡ್ಡ ಹೆಸರಿನಲ್ಲಿ ತಿದ್ದುಪಡಿ ಇದ್ದಲ್ಲಿ ಅಥವಾ ಅಂಕಪಟ್ಟಿಯಲ್ಲಿ ಕಾರ್ಯದರ್ಶಿಯವರ ಸಹಿ ಇಲ್ಲದೇ ಇದ್ದ ಸಂದರ್ಭದಲ್ಲಿ ಅಂತಹ ಮೂಲ ಅಂಕಪಟ್ಟಿಯನ್ನು ತಕ್ಷಣವೇ ಮಂಡಳಿಗೆ ಹಿಂದಿರುಗಿಸಿ ದೋಷ ತಿದ್ದುಪಡಿ ಮಾಡಿಸಿಕೊಳ್ಳತಕ್ಕದ್ದು.
4. ಅಭ್ಯರ್ಥಿಗಳ ಅಂಕಪಟ್ಟಿಯಲ್ಲಿ ದೋಷ ಇದ್ದಲ್ಲಿ ಸದರಿ ಅಭ್ಯರ್ಥಿಯ ವ್ಯಾಸಂಗ ಮಾಡಿದ/ಮಾಡುತ್ತಿರುವ ಶಾಲೆಯ ಮುಖ್ಯೋಪಾಧ್ಯಾಯರಿಂದ **ಎ.ಆರ್.ಇ. (Admission Register Extract) ಅಥವಾ ಟಿ.ಸಿ ಅಥವಾ ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿದ್ದಲ್ಲಿ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಸಂಬಂಧಿಸಿದ ಬಿ.ಇ.ಓ.ರವರಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.**
5. ಬೇರೆ ಕೇಂದ್ರದ ಅಂಕಪಟ್ಟಿ ಮತ್ತು ಎಂ.ಎಸ್.ಎ. ಗಳು ತಮ್ಮ ಕೇಂದ್ರಕ್ಕೆ ಬಂದಲ್ಲಿ ಕೂಡಲೇ ಮರು ಟಪಾಲಿನಲ್ಲಿ **ಶ್ರೀಮತಿ ಹೇಮಲತಾ ಡಿ. ನಾಯಕ್, ಸಹಾಯಕ ನಿರ್ದೇಶಕರು, ಸಂಗೀತ ಶಾಖೆ, 4ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03** ಈ ವಿಳಾಸಕ್ಕೆ ಸಲ್ಲಿಸಲು ತಿಳಿಸಿದೆ.
6. ಪ್ರತಿ ಅಭ್ಯರ್ಥಿಗೆ ಸಂಬಂಧಿಸಿದಂತೆ, ಅಭ್ಯರ್ಥಿಗೆ ಅಥವಾ ಅವರ ಪರವಾಗಿ ಪತ್ರ ತಂದವರಿಗೆ ಅಂಕಪಟ್ಟಿಗಳನ್ನು ವಿತರಿಸಲು ತಿಳಿಸಿದೆ. ಹಾಗೂ ಅಂಕಪಟ್ಟಿಗಳನ್ನು ಆದಷ್ಟೂ ಬೇಗ ವಿತರಿಸಲು ಕ್ರಮ ತೆಗೆದುಕೊಳ್ಳುವುದು.
7. ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಂದ ಅಂಕಪಟ್ಟಿಗಳನ್ನು ಒಂದು ತಿಂಗಳೊಳಗೆ ಪಡೆದುಕೊಳ್ಳಲು ತಿಳಿಸಿದೆ. ತಪ್ಪಿದಲ್ಲಿ ಮುಂದಿನ ಆಗುಹೋಗುಗಳಿಗೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರಾಗಲಿ ಅಥವಾ ಪರೀಕ್ಷಾ ಮಂಡಳಿಯವರಾಗಲಿ ಜವಾಬ್ದಾರರಾಗಿರುವುದಿಲ್ಲ. ಸಕಾಲಕ್ಕೆ ಅಂಕಪಟ್ಟಿಗಳನ್ನು ಪಡೆದುಕೊಳ್ಳದಿದ್ದಲ್ಲಿ ಅಭ್ಯರ್ಥಿಗಳೆ ಪೂರ್ಣ ಜವಾಬ್ದಾರರು. **ವಿತರಣೆಯಾಗದ ಅಂಕಪಟ್ಟಿಗಳನ್ನು ಪರೀಕ್ಷಾ ಕೇಂದ್ರದಲ್ಲಿ ಕಾಯ್ದಿರಿಸತಕ್ಕದ್ದು.**
8. **ಸೂಚನೆ : ಅಂಕಪಟ್ಟಿಯ ದೋಷ ತಿದ್ದುಪಡಿಯ ಪ್ರಕರಣಗಳಿಗೆ ಮಂಡಳಿ ನಿಯಮಾನುಸಾರ ರೂ. 100/- ಗಳ ಶುಲ್ಕ ವಿಧಿಸಿ ಸರಿಪಡಿಸಲಾಗುವುದು. ಸದರಿ ಮೊತ್ತವನ್ನು NEFT ಚಲನ್ ಮೂಲಕ ಪಾವತಿಸಿ ಮೂಲ ಅಂಕಪಟ್ಟಿ ಮತ್ತು ಮೇಲೆ ತಿಳಿಸಿದ ಯಾವುದಾದರೊಂದು ದಾಖಲೆಯೊಂದಿಗೆ ಸಲ್ಲಿಸತಕ್ಕದ್ದು.**

ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ
2. ಕಛೇರಿ ಪ್ರತಿ